# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:06-01-2021 ರಂದು ವಾರ್ಡ್ ಸಂಖ್ಯೆ:36, ಮತ್ತಿಕೆರೆ, ವಾರ್ಡ್ ಕಮಿಟಿ ಸಭೆ ನಡಾವಳಿಗಳು

ದಿನಾಂಕ:06-01-2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ಸಂ.36, ಮತ್ತಿಕೆರೆಯಲ್ಲಿ ಮಾನ್ಯ ಆಯುಕ್ತರ ಆದೇಶದ ರೀತ್ಯಾ ನೋಡಲ್ ಅಧಿಕಾರಿರವರಾದ ಶ್ರೀಮತಿ ಕುಸುಮಾ ರವರ ನೇತೃತ್ವದಲ್ಲಿ ನಡೆದ ವಾರ್ಡ್ ಕಮಿಟಿ ಸಭೆಗೆ ಸದಸ್ಯರು, ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕರು ಸಭೆಗೆ ಹಾಜರಾಗಿರುವುದು ವಿಶೇಷವಾಗಿತ್ತು.

ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಗೆ ಹಾಜರಾಗಿ ಅಧ್ಯಕ್ಷರು, ಸದಸ್ಯರು ಹಾಗೂ ಇತರೇ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದ ಮೇಲೆ ಅಧ್ಯಕ್ಷರು ಸಭೆಯನ್ನು ಮುಂದುವರಿಸಿದರು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಸದಸ್ಯರುಗಳು:**

1. ಸಹ ಕಂದಾಯ ಅಧಿಕಾರಿಗಳು (ಮತ್ತಿಕೆರೆ) ಉಪವಿಭಾಗ
2. ಆರೋಗ್ಯಾಧಿಕಾರಿಗಳು
3. ಬೆಸ್ಕಾಂ, ಮತ್ತಿಕೆರೆ
4. ಬಿ.ಡಬ್ಲ್ಯೂ.ಎಸ್.ಎಸ್.ಬಿ
5. ಯೋಜನಾ ವಿಭಾಗ (ಪಶ್ಚಿಮ)
6. ರಸ್ತೆ ಮೂಲಭೂತ ಸೌಕರ್ಯ (ಪಶ್ಚಿಮ)
7. ಠಾಣಾಧಿಕಾರಿಗಳು ಕಾನೂನು ಸುವ್ಯವಸ್ಥೆ (ಯಶವಂತಪುರ)
8. ಠಾಣಾಧಿಕಾರಿಗಳು ಸಂಚಾರ (ಯಶವಂತಪುರ)
9. ಠಾಣಾಧಿಕಾರಿಗಳು ಕಾನೂನು ಸುವ್ಯವಸ್ಥೆ (ಸದಾಶಿವನಗರ)
10. ಠಾಣಾಧಿಕಾರಿಗಳು ಸಂಚಾರ (ಸದಾಶಿವನಗರ)

**ಚರ್ಚಿಸಲಾದ ವಿಷಯಗಳು ಮತ್ತು ನಿರ್ಣಯಗಳು:**

1. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯಲ್ಲಿ **ಡಾ|| ಭಾಗ್ಯಲಕ್ಷ್ಮೀ, ಸಾರ್ವಜನಿಕರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು** ಕೋವಿಡ್ ಪರೀಕ್ಷಾ ವಿವರಗಳನ್ನು ಸಭೆಗೆ ವಿವರಿಸುತ್ತಾ, ದಿನಕ್ಕೆ ಸುಮಾರು 1054 ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿದ್ದು, ಅದರಲ್ಲಿ ಇಬ್ಬರಿಗೆ ರೋಗ ದೃಢಪಟ್ಟಿರುವುದು ಕಂಡುಬಂದಿರುತ್ತದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಯು.ಕೆ ಇಂದ ಸುಮಾರು 10 ಜನ ಬಂದಿದ್ದು, ಅವರುಗಳಿಗೆ ಕೋವಿಡ್ ಪರೀಕ್ಷೆ ನಡೆಸಿದ್ದು, ಯಾರಿಗೂ ಕೋವಿಡ್ ದೃಢಪಟ್ಟಿರುವುದಿಲ್ಲ. ಎಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.
2. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಕಸ ವಿಂಗಡನೆಗೆ ಸಂಬಂಧಿಸಿದಂತೆ, **ಘನತ್ಯಾಜ್ಯ ನಿರ್ವಹಣೆ ಇಲಾಖೆ** ಅಧಿಕಾರಿಗಳು ಮಾತನಾಡಿ, ಕಸ ವಿಂಗಡನೆ ಮಾಡಲು ಸರ್ಕಾರದಿಂದಲೇ ಆದೇಶವಿದ್ದು, ಕಸ ವಿಂಗಡನೆ ಮಾಡುವ ಕ್ರಮವನ್ನು ಆಟೋದಲ್ಲಿ ಪ್ರಚಾರಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
3. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಆರ್.ಕೆ. ಗಾರ್ಡನ್‌ನಲ್ಲಿ ವಾಸಿಸುತ್ತಿರುವ ಸ್ಥಳೀಯರು ಮಾತನಾಡಿ ಆರ್.ಕೆ. ಗಾರ್ಡನ್ ಜಂಕ್ಷನ್‌ನಲ್ಲಿ ಸಿಗ್ನಲ್ ಅಳವಡಿಸಲು ಸದಾಶಿವನಗರ ಟ್ರಾಫಿಕ್ ಸೆಲ್‌ರವರೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು.

..2..

Scanned with CamScanner

4. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ 1ನೇ ಮುಖ್ಯರಸ್ತೆ, ತ್ರಿವೇಣಿ ರಸ್ತೆಯ ಎರಡು ಬದಿಗಳಲ್ಲಿ ವ್ಯಾಪಾರ ಮಾಡುತ್ತಿದ್ದು, ಇಲ್ಲಿ ಬರುವ ಗ್ರಾಹಕರು ವಾಹನಗಳನ್ನು ನಿಲ್ಲಿಸಿ, ಸಾರ್ವಜನಿಕರು ಹಾಗೂ ಪಾದಚಾರಿಗಳ ಓಡಾಟಕ್ಕೆ ತೊಂದರೆವುಂಟು ಮಾಡುತ್ತಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಯಶವಂತಪುರ ಪೊಲೀಸ್ ಠಾಣೆ, ಟ್ರಾಫಿಕ್ ಸೆಲ್ ರವರಿಗೆ ಸಭೆಯಲ್ಲಿ ತಿಳಿಸಲಾಯಿತು.

5. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಪೈಪ್‌ಲೈನ್ ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳ ಓಡಾಟಕ್ಕೆ ತೊಂದರೆವುಂಟಾಗುತ್ತಿರುತ್ತದೆ ಈ ಬಗ್ಗೆ ಕ್ರಮ ಕೈಗೊಳ್ಳಲು ಯಶವಂತಪುರ ಪೊಲೀಸ್ ಠಾಣೆ, ಟ್ರಾಫಿಕ್ ಸೆಲ್ ರವರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಲಾಯಿತು.

6. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಎ.ಕೆ. ಕಾಲೋನಿ, ಜಯರಾಮ ಕಾಲೋನಿ ಮತ್ತು ಅಶ್ವಿನಿ ಸ್ಕೂಲ್ ಹತ್ತಿರ ಗುಂಪು ಗುಂಪಾಗಿ ಸಾರ್ವಜನಿಕರು ಸೇರುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲು ಯಶವಂತಪುರ ಪೊಲೀಸ್ ಠಾಣೆ, ಕಾನೂನು ಮತ್ತು ಸುವ್ಯವಸ್ಥೆ ರವರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಲಾಯಿತು.

7. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಹೆಚ್.ಎಂ.ಟಿ. ಮುಖ್ಯರಸ್ತೆಯಲ್ಲಿ 25 ಬೀದಿ ದೀಪಗಳು ಕಾರ್ಯನಿರ್ವಹಿಸದೇ ಇರುವುದರಿಂದ ಬೀದಿ ದೀಪಗಳು ವಿಭಾಗದ ಅಧಿಕಾರಿಗಳಿಗೆ, ಈ ಬಗ್ಗೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

8. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯಲ್ಲಿ 15-02-2021 ರ ನಂತರ ನವ ನಗರೋತ್ಥಾನ ಅನುದಾನದ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ ಇಲಾಖೆ ರವರು ಸಭೆಗೆ ತಿಳಿಸಿದರು.

ಅಧ್ಯಕ್ಷರ ಮೇರೆಗೆ ಇತರೆ ವಿಷಯಗಳನ್ನು ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

(ಕುಸುಮಾ).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.

Sushma.W
[AE-36]

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:16-01-2021 ರಂದು ವಾರ್ಡ್ ಸಂಖ್ಯೆ:36, ಮತ್ತಿಕೆರೆ, ವಾರ್ಡ್ ಕಮಿಟಿ ಸಭೆ ನಡಾವಳಿಗಳು

ದಿನಾಂಕ:16-01-2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ನಂ.36, ಮತ್ತಿಕೆರೆಯಲ್ಲಿ ಮಾನ್ಯ ಆಯುಕ್ತರ ಆದೇಶದ ರೀತ್ಯಾ ನೊಡಲ್ ಅಧಿಕಾರಿರವರಾದ ಶ್ರೀಮತಿ ಕುಸುಮಾ ರವರ ನೇತೃತ್ವದಲ್ಲಿ ನಡೆದ ವಾರ್ಡ್ ಕಮಿಟಿ ಸಭೆಗೆ ಸದಸ್ಯರು, ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕರು ಸಭೆಗೆ ಹಾಜರಾಗಿರುವುದು ವಿಶೇಷವಾಗಿತ್ತು.

ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಗೆ ಹಾಜರಾಗಿ ಅಧ್ಯಕ್ಷರು, ಸದಸ್ಯರು ಹಾಗೂ ಇತರೇ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದ ಮೇಲೆ ಅಧ್ಯಕ್ಷರು ಸಭೆಯನ್ನು ಮುಂದುವರಿಸಿದರು.

## ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಸದಸ್ಯರುಗಳು :

| | | |
|---|---|---|
| 1. | ನಾಗರಾಜ ಎಂ. | ಸಹಾಯಕ ಅಭಿಯಂತರರು,ವಾರ್ಡ್ 36 |
| 2. | ಸುಷ್ಮಾ ಕೆ.ಎಸ್. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಮತ್ತಿಕೆರೆ) ಉಪವಿಭಾಗ |
| 3. | ಹೊನ್ನಪ್ಪ | ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್ಎಸ್‌ಬಿ |
| 4. | ಟಿ.ಪಿ ಪ್ರಕಾಶ್ ಕುಮಾರ್ | ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್ಎಸ್‌ಬಿ |
| 5. | ವಿನೋದ್ ರಾತೋಡ್ | ಆರಕ್ಷಕರು, |
| 6. | ಕರುಣಾ | ಆರಕ್ಷಕರು, |
| 7. | ಬಿ.ನಾಗೇಶ್ | ಎಸ್‌ವಿಐ (ಎ.ಹೆಚ್) |
| 8. | ಎನ್.ಜಗದೀಶ | ಡಿ.ಆರ್.ಎಫ್.ಓ. |
| 9. | ನಲ್ಲಪ್ಪ | ಮೇಸ್ತ್ರಿ |
| 10. | ನರಸಿಂಹ | ಮೇಸ್ತ್ರಿ |

### ಚರ್ಚಿಸಲಾದ ವಿಷಯಗಳು ಮತ್ತು ನಿರ್ಣಯಗಳು:

1. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ನೇತಾಜಿ ವೃತ್ತದಿಂದ ರೈಲ್ವೇ ಟ್ರ್ಯಾಕ್ ಕಡೆಗೆ ಸಂಪರ್ಕಿಸುವ ರಸ್ತೆಯ ಅಕ್ಕಪಕ್ಕದಲ್ಲಿ ಬಿದ್ದಿರುವ ಡೆಬ್ರಿಸ್‌ನ್ನು ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆಯವರಿಗೆ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

2. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಹಾಗೂ ಚರಂಡಿಯ ಮೇಲ್ಭಾಗದಲ್ಲಿ ಬಿದ್ದಿರುವಂತಹ ಅನುಪಯುಕ್ತ ವಿದ್ಯುತ್ ಕಂಬಗಳನ್ನು ತೆರವುಗೊಳಿಸುವಂತೆ ಬೆಸ್ಕಾಂ ಇಲಾಖೆ ರವರಿಗೆ ಸಭೆಯಲ್ಲಿ ತಿಳಿಸಲಾಯಿತು

3. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿನ ವಸತಿ ಹಾಗೂ ವಸತಿಯೇತರ ಕಟ್ಟಡಗಳ ಬಗ್ಗೆ ದಾಖಲಾತಿಗಳನ್ನು ನೀಡುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಅಧ್ಯಕ್ಷರು ತಿಳಿಸಿದರು.

4. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ತ್ರಿವೇಣಿ ರಸ್ತೆಯ ಪಾದಚಾರಿ ಮಾರ್ಗಗಳನ್ನು ಅಂಗಡಿ ಮಾಲೀಕರು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಸಭೆಯಲ್ಲಿ ದೂರು ಬಂದಿದ್ದು, ಸಂಬಂಧಪಟ್ಟ ಇಲಾಖೆ ರವರು ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಒತ್ತುವರಿಯನ್ನು ತೆರವುಗೊಳಿಸಿ ಪಾದಚಾರಿಗಳ ಓಡಾಟಕ್ಕೆ ಅನುವು ಮಾಡಿಕೊಡಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

... 2...

Scanned with CamScanner

5. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಗಳ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗಗಳ ಮೇಲೆ ಸುರಿದಿದ್ದು, ಇದರಿಂದ ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಭೆಯಲ್ಲಿ ದೂರು ಬಂದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

ಅಧ್ಯಕ್ಷರ ಮೇರೆಗೆ ಇತರೆ ವಿಷಯಗಳನ್ನು ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

Sushma.M
18/01/2021.

(ಕುಸುಮಾ).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.

Scanned with CamScanner

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮತ್ತಿಕೆರೆ ಉಪ ವಿಭಾಗ, ನೇತಾಜಿ ವೃತ್ತ, ಮತ್ತಿಕೆರೆ, ಬೆಂಗಳೂರು-560

ಸಂಖ್ಯೆ:ಸ.ಕಾ.ನಿ.ಅ(ಎಂ.ಕೆ)/ಜಿ.ಎಲ್/ /20-21 ದಿನಾಂಕ:09-02-2021

**ದಿನಾಂಕ:06-02-2021 ರಂದು ವಾರ್ಡ್ ಸಂಖ್ಯೆ:36, ಮತ್ತಿಕೆರೆ, ವಾರ್ಡ್ ಕಮಿಟಿ ಸಭೆ ನಡಾವಳಿ**

ದಿನಾಂಕ:06-02-2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.36, ಮತ್ತಿಕೆರೆಯಲ್ಲಿ ಆಯುಕ್ತರ ಆದೇಶದ ರೀತ್ಯಾ ನೊಡಲ್ ಅಧಿಕಾರಿರವರಾದ ಶ್ರೀಮತಿ ಕುಸುಮಾ ರವರ ನೇತೃತ್ವದಲ್ಲಿ ವಾರ್ಡ್ ಕಮಿಟಿ ಸಭೆಗೆ ಸದಸ್ಯರು, ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕರು ಸಭೆಗೆ ಹಾಜರಾಗಿ ವಿಶೇಷವಾಗಿತ್ತು.

ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಗೆ ಹಾಜರಾಗಿ ಅಧ್ಯಕ್ಷರು, ಹಾಗೂ ಇತರೇ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದ ಮೇಲೆ ಅಧ್ಯಕ್ಷರು ಸಭೆಯನ್ನು ಮುಂದುವರಿಸಿದರು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಸಡಸ್ಯರುಗಳು :**

| | |
|---|---|
| 1. ಸುಷ್ಮಾ ಕೆ.ಎಸ್. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಮತ್ತಿಕೆರೆ) ಉಪವಿಭಾಗ |
| 2. ಹೊನ್ನಪ್ಪ | ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್ಎಸ್ಬಿ |
| 3. ಟಿ.ಪಿ ಪ್ರಕಾಶ್ ಕುಮಾರ್ | ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್ಎಸ್ಬಿ |
| 4. ವಿನೋದ್ ರಾತೋಡ್ | ಆರಕ್ಷಕರು, |
| 5. ಕರುಣಾ | ಆರಕ್ಷಕರು, |
| 6. ಬಿ.ನಾಗೇಶ್ | ಎಸ್ವಿಐ (ಎ.ಹೆಚ್) |
| 7. ಎನ್.ಜಗದೀಶ | ಡಿ.ಆರ್.ಎಫ್.ಓ. |
| 8. ನಲ್ಲಪ್ಪ | ಮೇಸ್ತ್ರಿ |
| 9. ನರಸಿಂಹ | ಮೇಸ್ತ್ರಿ |
| 10. ಪೂಜಾ | ಕಿರಿಯ ಆರೋಗ್ಯಾ ಪರಿವೀಕ್ಷಕರು |
| 11. ಮಂಜುನಾಥ ಬಿ | ಹಿರಿಯ ಆರೋಗ್ಯಾ ಪರಿವೀಕ್ಷಕರು |
| 12. ಕಿಶೋರ್.ಬಿ.ಎಸ್. | ವಾರ್ಡ್ 36 ಮಾರ್ಷಲ್ |
| 13. ವೀರಭದ್ರಯ್ಯ | ಮಾರ್ಷಲ್ ರವರ ಮೇಲ್ವಿಚಾರಕರು |
| 14. ವಿದ್ಯಾ .ಟಿ. | ಬೆಸ್ಕಾಂ ಸಹಾಯಕ ಇಂಜಿನೀಯರ್ |
| 15. ಡಾ॥ ಆಶೀಶ್ | ವೈದ್ಯರು |
| 16. ನವೀನ್ ಕುಮಾರ್ | ಕಂದಾಯ ವಸೂಲಿಗಾರರು |
| 17. ರಾಜಶೇಖರ್ | ಜ್ಯೂನಿಯರ್ ಇಂಜಿನೀಯರ್ ಬೆಸ್ಕಾಂ |
| 18. ನಲ್ಲಪ್ಪ ಬಿ | ಮೇಲ್ವಿಚಾರಕರು (ಘನತ್ಯಾಜ್ಯ ವಿಲೇವಾರಿ) |

ಚರ್ಚಿಸಲಾದ ವಿಷಯಗಳು ಮತ್ತು ನಿರ್ಣಯಗಳು:_

1. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಟೆಂಡರ್ ಕರೆದಿದ್ದು, ಕಸ ವಿಲೇವಾರಿ ಮಾಡುವ ಆಟೋಗಳಿಗೆ ಜಿ.ಪಿ.ಎಸ್ ಅಳಡಿಸಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಕಸ ವಿಲೇವಾರಿ ಆಟೋಗಳು ಬೆಳಿಗ್ಗೆ 6-30ರ ನಂತರ ಬರಲು ಸಾರ್ವಜನಿಕರು ಕೋರಿರುತ್ತಾರೆ. ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

2. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ ಮಾರ್ಷಲ್‌ಗಳು ಒಟ್ಟು ರೂ.54300/-ಗಳ ದಂಡ ವಸೂಲಿ ಮಾಡಿರುತ್ತಾರೆ. ಎಂದು ಸಭೆಯಲ್ಲಿ ತಿಳಿಸಲಾಯಿತು

3. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ರಾತ್ರಿ ವೇಳೆಯಲ್ಲಿ ಕಸವನ್ನು ಸುರಿಯುತ್ತಿರುವುದರಿಂದ, ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗಿರುತ್ತದೆ. ಈ ಬಗ್ಗೆ ಕ್ರಮವಹಿಸುವುದು ಹಾಗೂ ಒಂದು ತಿಂಗಳಲ್ಲಿ ಬೂಸಾ ಫ್ಯಾಕ್ಟರಿ ಹತ್ತಿರ ಇರುವ ಬ್ಲಾಕ್ ಸ್ಪಾಟ್‌ನ್ನು ತೆರವುಗೊಳಿಸಲು, ಅಧ್ಯಕ್ಷರು ಅಧಿಕಾರಿಗಳಿಗೆ ತಿಳಿಸಿದರು.

4. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಒಟ್ಟು 1 ಕೋವಿಡ್ ಕೇಸ್ ಪತ್ತೆಯಾಗಿರುತ್ತದೆ ಹಾಗೂ ಡಾಕ್ಟರ್‌ಗಳು, ಸ್ಟಾಫ್ ನರ್ಸ್‌ಗಳು ವ್ಯಾಕ್ಸಿನೇಷನ್ ಪಡೆಯಲಾಗಿರುತ್ತದೆ ಎಂದು ಆರೋಗ್ಯಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

5. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖಾವತಿಯಿಂದ UG Cable ಹಾಗೂ RMU ಯನ್ನು ಅಳವಡಿಸಲು ಪಾಲಿಕೆ ರಸ್ತೆ ಅಗೆದು ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸದೇ ಇರುವುದು ಕಂಡುಬಂದಿರುತ್ತದೆ.

- ತಾವು ಕಾಮಗಾರಿ ನಿರ್ವಹಿಸುವ ಸ್ಥಳದಲ್ಲಿ ಬ್ಯಾರಿಕೇಡಿಂಗ್ ಹಾಗೂ Caution tapeಗಳನ್ನು ಅಳವಡಿಸದೇ ಹಾಗೆಯೇ ಕಾಮಗಾರಿ ನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ.
- ಕಾಮಗಾರಿ ನಿರ್ವಹಿಸಿದ ನಂತರ ರಿಂಗ್ಸ್‌ಗಳನ್ನು ಅದೇ ಸ್ಥಳದಲ್ಲಿಯೇ ಬಿಟ್ಟು ಹೋಗಿದ್ದು ಇದರಿಂದ ಪಾದಚಾರಿಗಳು ಹಾಗೂ ವಾಹನ ಸವಾರರ ಓಡಾಟಕ್ಕೆ ತೊಂದರೆವುಂಟಾಗಿರುತ್ತದೆ.
- ತಾವು ಕಾಮಗಾರಿ ನಿರ್ವಹಿಸಲು ಅಗೆದಿರುವ ರಸ್ತೆಗಳನ್ನು ಸರಿಪಡಿಸದೇ ಹಾಗೆಯೇ ಬಿಟ್ಟಿರುವುದು ಕಂಡುಬಂದಿರುತ್ತದೆ.

ಈ ಮೇಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುವಂತೆ ಅಧ್ಯಕ್ಷರು, ಅಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಿದರು.

6. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖಾವತಿಯಿಂದ ಕಾಮಗಾರಿ ನಡೆಸುತ್ತಿದ್ದು, ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿದಲ್ಲಿ, ಕಾಮಗಾರಿ ಇಲಾಖೆಯಿಂದ ಪ್ಯಾಚ್‌ವರ್ಕ್ ಮಾಡಲಾಗುವುದು ಎಂದು ಸಭೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ತಿಳಿಸಲಾಯಿತು.

7. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ತ್ರಿವೇಣಿ ರಸ್ತೆ ಹಾಗೂ 1ನೇ ಮುಖ್ಯರಸ್ತೆ ಹೆಚ್.ಎಂ.ಟಿ. ರಸ್ತೆಯಲ್ಲಿ ರಸ್ತೆಬದಿಗಳಲ್ಲಿ ನಿಲ್ಲಿಸಿರುವ ಗಾಡಿಗಳನ್ನು ತೆರವುಗೊಳಿಸಿ ವಾಹಗಳು ಹಾಗೂ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸಂಬಂಧಪಟ್ಟ ಇಲಾಖೆ ಅಧ್ಯಕ್ಷರು ತಿಳಿಸಿದರು.

ಅಧ್ಯಕ್ಷರ ಮೇರೆಗೆ ಇತರೆ ವಿಷಯಗಳನ್ನು ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

Sushma.W
(AE-36)

09/02/21

(ಕುಸುಮಾ).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.

Scanned with CamScanner